of the Committee have not yet been looked into by the Government and they have not yet considered the same. However, Government will bear in mind any recommendations that the Committee has made for the disbursement of this amount.

Sri K. SAMPANGI RAMIAH.—Has the amount received by the Insolvency Court been pooled?

Mr. SPEAKER.—How does that question arise?

Sri K. SAMPANGI RAMIAH.—Were any amounts collected by the Official Receiver; what was the expenditure for that?

Mr. SPEAKER.—These questions do not arise.

Transfer of Mysore Railways to the Centre.

*Q.—20. **Sri M. GOVINDA REDDY** (Chitaldrug District—General).—Will the Government be pleased to place on the table, for the information of the House, the terms and conditions under which the Mysore Railways are proposed to be transferred to the Centre?

A.—**Sri H. C. DASAPPA** (Minister for Finance and Industries).—The terms and conditions are covered by the Report of the Indian States' Finances Enquiry Committee and the Agreement between this and the Central Government. They are contained in the Memorandum on "Federal Financial Integration" circulated separately.

Sri M. GOVINDA REDDY.—Is Narasimharajapura-Tarikere Tramway also taken under assets in the Railways?

Sri H. C. DASAPPA.—No, not the Narasimharajapura-Tarikere tramway line.

Sri M. GOVINDA REDDY.—Are there any other lines which are not taken under assets?

Sri H. C. DASAPPA.—There is the Nanjangud-Chamarajanagar Section. That does not come under assets.

Sri M. GOVINDA REDDY.—What is the position of assets and management of these lines?

Sri H. C. DASAPPA.—All the lines of the Mysore Railways proper will be taken over by the Centre, or have been taken over by the Centre.

Sri M. GOVINDA REDDY.—I am talking about lines, such as Nanjangud-Chamarajanagar line.

Sri H. C. DASAPPA.—That has been already answered. They will work under the same agreement that subsists between the District Board and the Government of Mysore. That has been answered the other day.

Sri Kadidal MANJAPPA (Shimoga District—General).—Under the Post-war Development Scheme, there was a proposal to construct new lines, for instance between Kadur and Chikmagalur. Are they going to give effect to that?

Sri H. C. DASAPPA.—The idea is this. We have the Railway Depreciation Fund in which there is more than what we need have put in. The Government of India have assured us that those money will be spent within the State. What lines they will take up is left to them and it is not for us to say. We can at best suggest to them as to which project should be given priority.

Sri H. M. CHANNABASAPPA (Mysore District—General).—Are the terms and conditions for the transfer of the Mysore Railways the same as the terms and conditions under which the local board railways are transferred?

Sri H. C. DASAPPA.—No local board railway has been transferred.

Sri H. M. CHANNABASAPPA.—So, shall I take it that the Nanjangud-Chamarajanagar Railway has not been transferred?

Sri H. C. DASAPPA.—Yes.

Implements Factory at Hassan.

*Q.—23. **Sri M. GOVINDA REDDY** (Chitaldrug District—General).—Will the Government be pleased to state:—

(*a*) the capital outlay on the Hassan Implements Factory;

(*b*) the kind and quantity or number of articles manufactured each year since 1947 in the Factory;

(*c*) the expenditure incurred on establishment in the Factory;

(*d*) profit or loss each year since the commencement of business?

A.—**Sri H. C. DASAPPA** (Minister for Finance and Industries).—

	Rs.
(*a*) Working Capital ...	4,00,000
Fixed Capital ...	3,62,156

...	...	1946-47	1947-48	1948-49
		No.	No.	No.
1	Agricultural Implements	21,307	54,729	50,286
2	Garden Implements	2,800	6,189	1,651
3	Estate Implements	2,364	6,790	10,280
4	Cutlery	19,254	19,318	18,237
5	Light structures	...	29 tons	61 tons
6	Miscellaneous	40,572	41,758	27,592

	1940-41	1941-42	1942-43	1943-44	1944-45	1945-46	1946-47	1947-48	1948-49
	Rs.	Rs.	Rs.	Rs.	Rs.	Rs.	Rs.	Rs.	Rs.
(*c*)	11,130	15,420	15,600	15,971	17,438	25,227	21,013	24,412	28,388
(*d*)	+4,600	...	+76,000	+70,100	+43,500	+63,500	+43,400	+17,824	+16,250

Sri M. GOVINDA REDDY.—In working out the profits, may I know whether any depreciation has been allowed on the machinery?

Sri H. C. DASAPPA.—It is allowed in the *pro forma* account.

Sri M. GOVINDA REDDY.—May I know the percentage?

Sri H. C. DASAPPA.—I am sorry I cannot give the percentage now. It has got to be worked out. The depreciation reserve is to the tune of a lakh and a half—about 50 per cent.

Sri M. GOVINDA REDDY.—Fifty per cent of the profits?

Sri H. C. DASAPPA.—Fifty per cent of the capital so far invested since inception, *i.e.*, in 1940. The depreciation reserve totals to a lakh and a half. I cannot tell the Hon'ble Member what percentage has been taken for the purpose of calculation.

Sri A. BHEEMAPPA NAIK (Chitaldrug District—General).—What is the percentage of profit that has been derived year by year?

Sri H. C. DASAPPA.—The profits are given; the percentage has got to be calculated.

Sri A. BHEEMAPPA NAIK.—It depends upon the investment made. Since we do not know the original investment and since later on only the turn-over amounts are being utilised, I just wanted to know the percentage.

Sri H. C. DASAPPA.—It is here. The Fixed Capital is Rs. 3,62,000; the profit is Rs. 16,250. The percentage may be worked out.

Sri A. BHEEMAPPA NAIK.—Is it a fact that the percentage of profit is decreasing year by year?

Sri H. C. DASAPPA.—Yes.

Sri A. BHEEMAPPA NAIK.—Wherefrom are the Government getting the raw materials for that factory?

Sri H. C. DASAPPA.—From various sources. I believe Bhadravati, the Railway Workshop—these are the two principal sources—and sheets from the Tatas also perhaps.

Sri A. BHEEMAPPA NAIK.—Is the raw materials purchased from Bhadravati Iron Works sold at the rates at which it is sold to the general public?

Sri H. C. DASAPPA.—I should think so. But I want notice. I should think it is sold at the same rate as it is sold to the rest of the public.

Sri A. BHEEMAPPA NAIK.—Wherefrom is the man-power for work in this factory got? Is it from Malabar?

Sri H. C. DASAPPA.—It started like that. But a good proportion is local.

Sri A. BHEEMAPPA NAIK.—Is there a proposal to hand it over to the management of a non-official agency?

Sri H. C. DASAPPA.—If proper terms are forthcoming, I will be glad to consider the proposal.

Sri H. SIDDAVEERAPPA (Chitaldrug District— General).—It was said that the profits are decreasing year by year; may I know the reason?

Sri H. C. DASAPPA.—The cost of labour has gone up. The cost of raw material has gone up. The articles manufactured are not moving as fast as we desire.

Sri H. SIDDAVEERAPPA.—It is seen from the figures given that in the year 1942-43 the maximum profit is Rs. 70,100. Is it for the same Fixed Capital of Rs. 3,62,000?

Sri H. C. DASAPPA.—I could not tell. It must be something less obviously because Fixed Capital grows with years.

Sri H. SIDDAVEERAPPA.— In view of the fact that profits are progressively deteriorating every year, what steps have the Government taken to see that the factory works on a profitable basis?

Sri H. C. DASAPPA.—The department concerned is taking every step to see that the profits increase. We have got very strong rivals, the Tatas, for instance. There is a good deal of propaganda going about in the country that the Tatas goods are better than ours. I am in a position to authoritatively say that our goods are as good as anything else but this is a question of business propaganda, I believe. This factory, of all, requires a little propaganda and that has got to be looked into.

Sri H. SIDDAVEERAPPA.—Are the goods manufactured in this factory consumed only in our State or are they exported also?

Sri H. C. DASAPPA.—Mostly in our State.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಅಲ್ಲ ತಯಾರಾಗತಕ್ಕ ಸಾಮಾನುಗಳ ಎಂದರೆ ವ್ಯವಸಾಯದ ಮುಟ್ಟುಗಳು ವಗ್ಗೈರೆಗಳ ಬೆರೆ ಒಂದಕ್ಕೆ ಮೂರರಷ್ಟು ಜಾಸ್ತಿ ಎಂಬುದು ಗೊತ್ತೇ?

ಶ್ರೀ ಎಚ್. ಸಿ. ದಾಸಪ್ಪನವರು.—ಒಂದಕ್ಕೆ ಮೂರ ರಷ್ಟು ಎಂದು ಒಪ್ಪಿಕೊಳ್ಳುವುದಿಲ್ಲ; ಜಾಸ್ತಿ ಎಂದು ಒಪ್ಪಿಕೊಳ್ಳುತ್ತೇನೆ.

ಶ್ರೀ ಎಸ್. ರಂಗರಾಮಯ್ಯನವರು.—ಏಕೆ ಜಾಸ್ತಿ ಯಾಗುತ್ತದೆ ಎಂಬುದನ್ನು ಪರಿಶೀಲನೆ ಮಾಡಿದ್ದೀರಾ?

ಶ್ರೀ ಎಚ್. ಸಿ. ದಾನಪ್ಪನವರು.—ಮಾಡಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಕಾರಣ ಏನು?

ಶ್ರೀ ಎಚ್. ಸಿ. ದಾಸಪ್ಪನವರು.—ಹೊರಗಿನವರಿಗೆ ಕಚ್ಚಾ ಸಾಮಾನುಗಳು ಸುಲಭವಾಗಿ ಸಿಕ್ಕುತ್ತದೆ. ಇದು ಒಂದನೆಯದು. ಎರಡನೆಯದು, ಅವರದು ದೊಡ್ಡ ಫ್ಯಾಕ್ಟರಿ—ಬಹಳಮಟ್ಟಿಗೆ ಯಂತ್ರೀಕರಿಸಿರುತಕ್ಕಂಥಾದ್ದು. ನಮ್ಮದು mechanised ಅಲ್ಲ. ಆದ್ದರಿಂದ ಸ್ವಲ್ಪ ಖರ್ಚು ಜಾಸ್ತಿ ಆಗುತ್ತಾ ಇದೆ. ಅವರು ಮಾಡಿರುವ ಹಾಗೇ ಯಂತ್ರೀಕರಣ ಮಾಡಬೇಕೆಂದು ನಮ್ಮ ಸಲಹೆಯಾಗಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಆ ಸಾಮಾನುಗಳನ್ನು ಮಲ್ಪಪರ್ಪಸ್ ಕೊ-ಆಪರೇಟೀವ್ ಸೊಸೈಟಿಗಳಿಗೆ ಕೊಡುವುದಕ್ಕೆ ಹೋದರೆ ಅವರು ಖರ್ಚಾಗುವುದಿಲ್ಲ, ಬಹಳ ಜಾಸ್ತಿ ಖರೀದಿ ಎಂದು ದೂರು ಬಂದಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಸಿ. ದಾನಪ್ಪನವರು.—ಕೆಲವು ಕಡೆ ಬಂದಿದೆ. ಆದರೆ ಇನ್ನೂ ಕೆಲವು ಕಡೆ ಚೆನ್ನಾಗಿ ಖರ್ಚಾಗುತ್ತಾ ಇದೆ.

ಶ್ರೀ ಎಸ್. ರಂಗರಾಮಯ್ಯನವರು.—ಬೆರೆ ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೀರಾ?

ಶ್ರೀ ಎಚ್. ಸಿ. ದಾನಪ್ಪನವರು.—ಸಾಕಾದಷ್ಟು ಮಾಡಿದೆ. ಶೇಕಡಾ 25 ರಷ್ಟು ಕಡಿಮೆ ಮಾಡರಾಗಿದೆಂದು ಕಾಣುತ್ತೆ.

ಶ್ರೀ ಎಸ್. ರಂಗರಾಮಯ್ಯನವರು.—ಕೆಲವು ಸಾಮಾನುಗಳು ಉಪಯೋಗಕ್ಕೆ ಬರದೇ ಇರುವುದು ಗೊತ್ತೆ?

ಶ್ರೀ ಎಚ್. ಸಿ. ದಾನಪ್ಪನವರು.—ಇಲ್ಲ.

ಶ್ರೀ ಎಸ್. ರಂಗರಾಮಯ್ಯನವರು.—ಬಂದರೆ ಸರಿಪಡಿಸುತ್ತೀರಾ?

ಶ್ರೀ ಎಚ್. ಸಿ. ದಾನಪ್ಪನವರು.— ಆರೀತಿ ಆಗುತ್ತಾ ಇಲ್ಲ. ಈಗ ಮಾರ್ಕೆಟ್‌ನಲ್ಲಿ ಯಾವ ವಸ್ತುಗಳಿಗೆ ಡಿಮ್ಯಾಂಡ್ ಇದೆಯೋ ಅವನ್ನೇ ತಯಾರು ಮಾಡಬೇಕೆಂದು ತೀರ್ಮಾನವಾಗಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಇಂಪ್ಲಿಮೆಂಟ್ ಫ್ಯಾಕ್ಟರಿಯಲ್ಲ ಕೆಲಸ ಸರಿಯಾಗಿ ನಡೆಯುತ್ತಿಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿದೆಯೆ?

ಶ್ರೀ ಎಚ್. ಸಿ. ದಾನಪ್ಪನವರು.—ಕೆಲಸ ನಮರ್ಪಕವಾಗಿ ನಡೆಯುತ್ತಾ ಇದೆ. ಸುಲಭವಾಗಿ ಖರ್ಚಾಗುವಂಥ ಸಾಮಾನುಗಳನ್ನು ತಯಾರು ಮಾಡದೆ, ಹಿಂದೆ ಯಾವರೀತಿ ಖರ್ಚಾಗುತ್ತಾ ಇತ್ತೋ ಅದರ ಆಧಾರದ ಮೇಲೆ ಮಾಡುತ್ತಾ ಇದ್ದಾರೆ. ಆದ್ದರಿಂದ ಈಗ ಮಾರ್ಕೆಟ್‌ನಲ್ಲ ಮಾರುವುದಕ್ಕೆ ಯಾವುದಕ್ಕೆ ಡಿಮ್ಯಾಂಡ್ ಇದೆಯೋ ಅದನ್ನೇ ತಯಾರು ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ.

ಶ್ರೀ ಎಸ್. ರಂಗರಾಮಯ್ಯನವರು.—ಅಲ್ಲ ಲೋಕಲ್ ಕಂಡೀಷನ್‌ಗೆ ಲಗತ್ತಾದ ಸಾಮಾನುಗಳನ್ನು ತಯಾರು ಮಾಡುವುದಿಲ್ಲ ಎಂಬುದು ಗೊತ್ತೇ?

ಶ್ರೀ ಎಚ್. ಸಿ. ದಾನಪ್ಪನವರು.— ಹಾಗೇನೂ ಇಲ್ಲ. ಕೆಲವು ವಿಚಾರಗಳಲ್ಲಿ ಅಲ್ಪಸ್ವಲ್ಪ ವ್ಯತ್ಯಾಸ ಬರುತ್ತದೆ. ಮಲೆನಾಡಿಗೆ ಬೇಕಾಗತಕ್ಕ ಸಾಮಾನುಗಳು ಬೇರೆ, ಪಬ್ಲಿಕ್‌ವರ್ಕ್ಸ್ ಇಲಾಖೆಗೆ ಬೇಕಾಗತಕ್ಕ ಸಾಮಾನುಗಳು ಬೇರೆ ಈರೀತಿ ಇರುತ್ತದೆ. ಪಬ್ಲಿಕ್ ವರ್ಕ್ಸ್ ಇಲಾಖೆಗೆ ಈ ವಿಷಯವನ್ನು ತಿಳಿಸಿದೆ. ಅವರಿಗೆ ಬೇಕಾದ ಸಾಮಾನುಗಳನ್ನು, ಈ ಕಾರ್ಖಾನೆಯಿರೆದಲೇ ತೆಗೆದುಕೊಳ್ಳಿ ಎಂದು ತಿಳಿಸಿದೆ. ಹೊರಗಿನಿಂದ ತರಿಸುವ ಬದಲು ಇಲ್ಲಿಂದಲೇ ತೆಗೆದುಕೊಳ್ಳುವುದು ಪ್ರೇಲೆಂದು ತಿಳಿಸಿದ್ದೆ.

ಶ್ರೀ ಎಸ್. ರಂಗರಾಮಯ್ಯನವರು.—ಇಷ್ಟೆಲ್ಲಾ ದೋಷದೋಷಗಳಿರುವುದರಿಂದ ಮ್ಯಾನೇಜ್‌ಮೆಂಟನ್ನು ಬದರಾಯಿಸುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎಚ್. ಸಿ. ದಾಸಪ್ಪನವರು.—ಆ ವಿಷಯದಲ್ಲಿ ಶ್ರೀಮಾನ್ ಭೀಮಪ್ಪನಾಯಕರ ಪ್ರಶ್ನೆಗೆ ಉತ್ತರ ಕೊಟ್ಟಿದ್ದೇನೆ.

ಶ್ರೀ ಎಸ್. ರಂಗರಾಮಯ್ಯನವರು.—ಜನಗಳ ಅಭಿಪ್ರಾಯ ತೆಗೆದುಕೊಂಡು ಯಾವ ತರಹ ಸಾಮಾನುಗಳನ್ನು ಮಾಡಬೇಕೆಂಬುದನ್ನು ತಿಳಿದುಕೊಳ್ಳಲು ಒಂದು ಸಮಿತಿಯನ್ನು ಏರ್ಪಾಡುಮಾಡಲು ಪ್ರಯತ್ನಪಡುತ್ತೀರಾ ?

Sri H. C. DASAPPA.—The Hon'ble Member knows that departmental officers are continuously in touch with the market and so we can trust the department to do all that is necessary to step up production.

ಶ್ರೀ ಎಸ್. ರಂಗರಾಮಯ್ಯನವರು.—ಈ departmental officers ಎನ್ನುವವರಿಗೆ practical knowledge ಇಲ್ಲ ಎನ್ನುವುದನ್ನು ಒಪ್ಪಿಕೊಳ್ಳುತ್ತೀರಾ ?

ಶ್ರೀ ಎಚ್. ಸಿ. ದಾಸಪ್ಪನವರು.—ಖಂಡಿತವಾಗಿ ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ.

Sri Kadidal MANJAPPA (Shimoga District—General).—Will the Government examine the questiou of transferring the factory to Bhadravati ?

Sri H. C. DASAPPA.—That is a mere proposal; I cannot answer.

Sri Kadidal MANJAPPA.—Will it not be more profitable to transfer it to Bhadravati ?

Sri H. C. DASAPPA.—I will have no objection to have it examined. But Hassan may complain that we are taking away the one small industry that is in the district.

Sri Kadidal MANJAPPA.—What is the use of incurring loss every year ? Who is in sole charge of the factory ?

Sri H. C. DASAPPA.—The Director of Industries and Commerce.

Sri Kadidal MANJAPPA.—Have the Government thought of having a Board of Management for the factory ?

Sri H. C. DASAPPA.—This is too small a factory to have a separate Board of Management.

Sri Kadidal MANJAPPA.—Have a small committee of management.

Sri H. C. DASAPPA.—I should welcome if there is a small committee. I have no objection.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು (ಚಿಕ್ಕಮಗಳೂರು ಜಿಲ್ಲೆ).—1948–49ರಲ್ಲಿ 16 ಸಾವಿರ ಚಿಲ್ಲರೆ ಉತ್ಪತ್ತಿ ಬಂದಿದೆಯೆಂದು ತಿಳಿಸಿದ್ದೀರಿ. ಆಗ್ಯೆ ತಾವು ಸಾಮಾನುಗಳ ಬೆಲೆಯನ್ನು 1942–43ನೆಯ ಸಾಲಿನಲ್ಲಿದ್ದ ಬೆಲೆಗಿಂತ ಏನಾದರೂ ಜಾಸ್ತಿ ಮಾಡಿದ್ದಿರಾ ?

ಶ್ರೀ ಎಚ್. ಸಿ. ದಾಸಪ್ಪನವರು.—ಈಗ ಬೆಲೆಯಲ್ಲಿ ಸ್ವಲ್ಪ ಜಾಸ್ತಿಯಾಗಿರಬಹುದು.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—ಹಾಗಿದ್ದರೆ ಈಗ ತಯಾರಾಗುತ್ತಿರುವ ಪದಾರ್ಥಗಳೆಲ್ಲವೂ ಸರೀಸಾಗಿ ಮಾರಾಟವಾಗುತ್ತಿವೆಯೇ ಅಥವಾ ಸಾಮಾನುಗಳು ಮುಲ್ಕ ನಿಲ್ಲುತ್ತಿವೆಯೇ ?

ಶ್ರೀ ಎಚ್. ಸಿ. ದಾಸಪ್ಪನವರು.—ಸ್ವಲ್ಪಮಟ್ಟಿಗೆ ಉಳಿಯುತ್ತಿವೆ.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—ಹಾಗೆ ಸಾಮಾನುಗಳು ಸರಿಯಾಗಿ ಮಾರಾಟವಾಗದೆ ಉಳಿಯುತ್ತಿದ್ದಾಗ್ಯೂ, ಅವುಗಳ ಉತ್ಪತ್ತಿಯನ್ನು ಪುನಃ ಜಾಸ್ತಿಮಾಡಬೇಕೆಂದು ಏರ್ಪಾಡು ಮಾಡಿದ್ದೀರಾ ?

ಶ್ರೀ ಎಚ್. ಸಿ. ದಾಸಪ್ಪನವರು.—ಹಾಗೆ ಮುಲ್ಕ ನಿಂತಿರುವ ಸಾಮಾನುಗಳನ್ನು ಪುನಃ ತಯಾರುಮಾಡಕೂಡದೆಂದು ತಿಳಿಸಲಾಗಿರುತ್ತೆಂಬ ಉತ್ತರವನ್ನು ಶ್ರೀ ರಂಗರಾಮಯ್ಯನವರ ಪ್ರಶ್ನೆಗೆ ಆಗಲೆ ತಿಳಿಸಲಾಗಿದೆ.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—ಹಾಗೆ ಬೆಲೆಯನ್ನು ಏರಿಸಿರುವುದರಿಂದ ಈ ಸಾಮಾನುಗಳು ಮುಲ್ಕ ಬಿದ್ದಿವೆಯಲ್ಲವೇ ?

ಶ್ರೀ ಎಚ್. ಸಿ. ದಾಸಪ್ಪನವರು.—ಸಾಮಾನುಗಳು ಸ್ವಲ್ಪಮಟ್ಟಿಗೆ ಇದ್ದರೂ ಇರಬಹುದು. ಸಾಗಬೇಕಾಗಿದೆ.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—ಹಾಗಾದರೆ ಬೆಲೆ ಏರಿಸಿದ್ದಾಗ್ಯೂ ನಷ್ಟವೇಕೆ ಆಗುತ್ತಿದೆ ?

ಶ್ರೀ ಎಚ್. ಸಿ. ದಾಸಪ್ಪನವರು.—ಎಷ್ಟು ಸಾಮಾನುಗಳು ಮಾರಾಟವಾಗಬೇಕಾಗಿತ್ತೋ ಅಷ್ಟು ಮಾರಾಟವಾಗುತ್ತಿಲ್ಲ. ಆದುದರಿಂದ ಸ್ವಲ್ಪ ನಷ್ಟವಾಗುತ್ತಿದೆ.

Sri H. M. CHANNABASAPPA (Mysore District—General).—Have Government received any petitions about the maladministration of the factory ?

Sri H. C. DASAPPA.—No.

ಶ್ರೀ ಎ. ಜಿ. ರಾಮಚಂದ್ರರಾಯರು (ಹಾಸನ ಜಿಲ್ಲೆ).—1942–43ರಲ್ಲಿ ಬೆರೆ ಕಡಿಮೆಯಾಗಿದ್ದಾಗ್ಯೂ ನಷ್ಟ ಬಂದು ಈಗ ಲುಕ್ಸಾನಾಗಲು ಬೇರೆ ಕಾರಣಗಳೇನಾದರೂ ಇವೆಯೆ ?

ಶ್ರೀ ಎಚ್. ಸಿ. ದಾಸಪ್ಪನವರು.—ಆ ಕಾರಣಗಳನ್ನೆಲ್ಲಾ ಆಗಲೇ ವಿವರವಾಗಿ ತಿಳಿಸಿದ್ದೇನೆ.

ಶ್ರೀ ಎ. ಜಿ. ರಾಮಚಂದ್ರರಾಯರು.—ಹೀಗೆ ಲುಕ್ಸಾನಾಗತಕ್ಕದ್ದನ್ನು ತಡೆಗಟ್ಟಲು ಅಲ್ಲಯ ಮ್ಯಾನೇಜರು ಯಾವ ಸಲಹೆಗಳನ್ನೇನಾದರೂ ಕಳುಹಿಸಿಕೊಟ್ಟಿದ್ದಾರೆಯೇ ?

ಶ್ರೀ ಎಚ್. ಸಿ. ದಾಸಪ್ಪನವರು.—ಹೆಚ್ಚು ಯಂತ್ರೀಕರಣ ಮಾಡಬೇಕೆಂಬ ಒಂದು ಸಲಹೆ ಬಂದಿದೆ.

ಶ್ರೀ ಎ. ಜಿ. ರಾಮಚಂದ್ರರಾಯರು.—ಹಾಗೆ ಬಂದಿರುವ ಸಲಹೆಗನುಗುಣವಾಗಿ ಸರ್ಕಾರದವರೇನಾದರೂ ಒಂದು ನೂಚನೆ ಕೊಟ್ಟಿದ್ದಾರೆಯೇ ?

ಶ್ರೀ ಎಚ್. ಸಿ. ದಾಸಪ್ಪನವರು.—ಕೊಟ್ಟಿದೆ.

ಶ್ರೀ ಎ. ಜಿ. ರಾಮಚಂದ್ರರಾಯರು.—ಈ ಕಂಪೆನಿಯಲ್ಲಿ ತಯಾರಾಗತಕ್ಕ ಸಾಮಾನುಗಳನ್ನೇ ನಮ್ಮ ಸರ್ಕಾರದವರೂ ಮತ್ತು ನಮ್ಮ ದೇಶದ ಖಾಸಗೀ

ಜನರೂ ಕೊಂಡುಕೊಳ್ಳಬೇಕೆಂಬ ಸೂಚನೆಯನ್ನೇನಾದರೂ ಕೊಟ್ಟಿದ್ದೀರಾ ?

ಶ್ರೀ ಎಚ್. ಸಿ. ದಾಸಪ್ಪನವರು.—ಕೊಟ್ಟಿದ್ದೇವೆ.

ಶ್ರೀ ಎ. ಜಿ. ರಾಮಚಂದ್ರರಾಯರು.—ಈ ಸಾಮಾನುಗಳನ್ನು ಪಿ. ಡಬ್ಯ್ಲು. ಡಿ. ಯವರೂ ತೆಗೆದುಕೊಳ್ಳಬೇಕೆಂಬ ಒತ್ತಾಯವನ್ನು ತಾವು ಮಾಡಿದ್ದೀರಾ ?

ಶ್ರೀ ಎಚ್. ಸಿ. ದಾಸಪ್ಪನವರು.—ಇಲ್ಲಿಯತನಕ ಪಿ.ಡಬ್ಯ್ಲು.ಡಿ.ಯವರು ತಮಗೆ ಬೇಕಾಗುವ ಸಾಮಾನುಗಳನ್ನು ಸ್ಟೋರ್ಸ್ ಪರ್ಚೇಸ್ ಕಮಿಟಿಯವರಿಗೆ ಬರೆದು ಅವರಿಂದ ಬೆಲೆಗಳನ್ನು ತರಿಸಿಕೊಂಡು ಅವರಿಗೆ ಅನುಕೂಲ ಬಂದಕಡೆ ತೆಗೆದುಕೊಳ್ಳುತ್ತಿದ್ದರು. ಅದು ಮೈಸೂರು ದೇಶದ್ದಾಗಲೀ ಅಥವ ಹೊರಗಡೆಯಲ್ಲಿ ತಯಾರಾದದ್ದಾಗಲಿ ಅದಕ್ಕೆ ಅವರು ಆಷ್ಟು ಗಮನ ಕೊಡುತ್ತಿರಲಿಲ್ಲ. ಆದರೆ ಈಗ ನಾವು ಅವರಿಗೆ ಸರಿಯಾದ ತಿಳುವಳಿಕೆಯನ್ನು ಕೊಟ್ಟಿದ್ದೇವೆ. ಅದರಿಂದ ನಾಲ್ಕುಕಾಸು ಹೆಚ್ಚಾಗಿ ಖರ್ಚಾದರೂ ಚಿಂತೆಯಿಲ್ಲ. ನಮ್ಮ ದೇಶದಲ್ಲಿ ತಯಾರಾಗುವ ಮಾಲುಗಳನ್ನೇ ತೆಗೆದುಕೊಳ್ಳಬೇಕೆಂಬ ಸೂಚನೆ ಕೊಡಲಾಗಿದೆ.

ಶ್ರೀ ಎ. ಜಿ. ರಾಮಚಂದ್ರರಾಯರು.—ಈ ಪ್ರಕಾರ ಪಿ. ಡಬ್ಯ್ಲು. ಡಿ. ಇಲಾಖೆಯವರು ಸಾಮಾನುಗಳನ್ನು ಇಲ್ಲಿ ಕೊಂಡುಕೊಳ್ಳದಿರುವುದರಿಂದ, ಹೀಗೆ ಸಾಮಾನುಗಳು ಅಲ್ಲಿ ಹೆಚ್ಚಾಗಿ ಮುಲ್ಕು ನಿಲ್ಲುತ್ತವೆಂದು ತಿಳಿದು ಬಂದಿದೆ. ಇದನ್ನು ತಾವು ಸರಿಪಡಿಸುತ್ತೀರಾ !

ಶ್ರೀ ಎಚ್. ಸಿ. ದಾಸಪ್ಪನವರು.—ಸರಿಪಡಿಸಲಾಗುತ್ತೆ.

ಶ್ರೀ ಬಿ. ಎಕ್. ಬೋರಣ್ಣಗೌಡರು (ಹಾಸನ ಜಿಲ್ಲೆ).—ಬಂಡವಾಳ ಈ ಬಗ್ಗೆ ಸಾಲದು ಎಂಬುದಾಗಿ ಏನಾದರೂ ಅಲ್ಲಿಯ ಜನರಲ್ ಮ್ಯಾನೇಜರವರಿಂದ ತಮಗೆ ಸಲಹೆಗಳು ಏನಾದರೂ ಬಂದಿದೆಯೇ ?

ಶ್ರೀ ಎಚ್. ಸಿ. ದಾಸಪ್ಪನವರು.—ಅದೊಂದು ಸೂಚನೆ ಬಂದಿದೆ. ಆ ಬಗ್ಗೆ ಉತ್ತರವನ್ನಾಗಲೇ ಶ್ರೀ ಎ. ಜಿ. ರಾಮಚಂದ್ರರಾಯರ ಪ್ರಶ್ನೆಯ ಸಂದರ್ಭದಲ್ಲಿ ತಿಳಿಸಿದ್ದೇನೆ. I am sorry I have not got the information. It will be some lakhs of rupees–at least Rs. four to five lakhs. ನನಗೆ ಖಚಿತವಾದ ಅಂಕಿ ಅಂಶಗಳು ಗೊತ್ತಿಲ್ಲ.

ಶ್ರೀ ಬಿ. ಎಕ್. ಬೋರಣ್ಣಗೌಡರು.—ಈಗ ಆ ಭಾಗಕ್ಕೆ ಹಾಕಿರತಕ್ಕ ಮೂಲ ದ್ರವ್ಯ ಸಾಲದೆಂದು ಕಂಡು ಬಂದರೆ ಆ ಬಗ್ಗೆ ಹೆಚ್ಚು ಪೊಬಲಗನ್ನು ಒದಗಿಸುತ್ತೀರಾ ?

ಶ್ರೀ ಎಚ್. ಸಿ. ದಾಸಪ್ಪನವರು.—ಆಲೋಚನೆ ಮಾಡಲಾಗುತ್ತದೆ.

ಶ್ರೀ ಬಿ. ಎಕ್. ಬೋರಣ್ಣಗೌಡರು.—ಎಷ್ಟು ಪೊಬಲಗನ್ನು ಒದಗಿಸಲಾಗುತ್ತೆಂಬುದನ್ನು ತಿಳಿಸುವಿರಾ ?

Sri H. C. DASAPPA.—I must again say that this is a matter to be considered.

ಶ್ರೀ ಬಿ. ಎಕ್. ಬೋರಣ್ಣಗೌಡರು.—ಅಲ್ಲಿ ಹೆಚ್ಚಿಗೆ ಜಮೀನಿಲ್ಲದೆ ಹೆಚ್ಚು ಕೆಲಸಮಾಡಲು ಅನುಕೂಲವಿಲ್ಲದಿರುವುದರಿಂದ, ಆ ತೊಂದರೆಯನ್ನು ತಪ್ಪಿಸಲು ಆಲೋಚನೆ ಮಾಡುತ್ತೀರಾ ?

ಶ್ರೀ ಎಚ್. ಸಿ. ದಾಸಪ್ಪನವರು.—ಬೆಳೆಯುವುದಕ್ಕೆ ಬೇಕಾದಷ್ಟು ಜಮೀನನ್ನು ಒದಗಿಸಲಾಗಿದೆ. ಮಾನ್ಯ ಒಳಾಡಳಿತ ಸಚಿವರು ಪ್ರತಿಯೊಂದು ಕೈಗಾರಿಕೋದ್ಯಮಗಳ ಬಗ್ಗೆ ಅವರವರೇ ತಮ್ಮ ಸ್ವಾವಲಂಬನ ನೀತಿಗನುಗುಣವಾಗಿ ನಡೆದುಕೊಳ್ಳಲು ಅನುಕೂಲವಾಗುವಂತೆ ವ್ಯವಸಾಯಕ್ಕೆ ಸಾಕಷ್ಟು ಜಮೀನು ಒದಗಿಸಿದ್ದಾರೆ. ತಾವು ತಿಳಿಸಿದಂಥಾ ಅಭಾವವಿರಲಾರದು.

ರಾಜಮಂತ್ರಪ್ರವೀಣ ಎಚ್. ಬಿ. ಗುಂಡಪ್ಪಗೌಡರು (ಹಾಸನ ಜಿಲ್ಲೆ).—ಈ ಇಂಪ್ಲಿಮೆಂಟ್ಸ್ ಫ್ಯಾಕ್ಟರಿಯಿಂದ ಕೊನೆಯ ವರ್ಷದಲ್ಲಿ ಅಂದರೆ 1948-49ರಲ್ಲಿ ಹಿಂದಿನ ಸಾಲಗಿಂತ ಜಾಸ್ತಿ ಆದಾಯ ಬರಲು ಅಥವ ಅದು ಕಡಿಮೆಯಾಗಲು ಕಾರಣವೇನಿರಬಹುದೆಂಬ ಬಗ್ಗೆ ಅದನ್ನು ತಾವು review ಮಾಡಿಸಿದ್ದೀರಾ ?

ಶ್ರೀ ಎಚ್. ಸಿ. ದಾಸಪ್ಪನವರು.—General revision of salaries ವಿಚಾರ ಆಗ್ಯೆ ಬಂದಿತ್ತು. ಆ ಕಾರಣ ಆದರ ಪ್ರಯೋಜನವನ್ನು ಅವರಿಗೂ ಕೊಡುವ ಉದ್ದೇಶದಿಂದ ಆಗ್ಯೆ ಖರ್ಚು ಸ್ವಲ್ಪ ಜಾಸ್ತಿ ಬಂದಿದೆ. Review ವನ್ನು ಪ್ರತಿ ವರ್ಷವೂ ಮತ್ತು ಕೆಲವು ವೇಳೆ ಆರು ತಿಂಗಳಿಗೊಂದಾವರ್ತಿಯೂ ಮಾಡಲಾಗುತ್ತಿದೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—1941-42 ರಿಂದ 1946ರವರಿಗೂ ನಷ್ಟ ಹೆಚ್ಚಾಗಿ ಬರ್ತುತ್ತಿದ್ದುದಕ್ಕೇನು ಕಾರಣ ?

ಶ್ರೀ ಎಚ್. ಸಿ. ದಾಸಪ್ಪನವರು.—ಆಗ ಯುದ್ಧ ಕಾಲ ಆಗಿತ್ತು. ಬೇರೆ ಹೊರದೇಶಗಳ ಮಾಲು ಬರುತ್ತಿರಲಿಲ್ಲ. ಆದಕಾರಣ ಆಗ ವ್ಯಾಪಾರ ಚೆನ್ನಾಗಿ ನಡೆದು ಹೆಚ್ಚಾಗಿ ನಫೆ ಬಂದಿದೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—Overhead charges ಶೇಕಡ 15ರಿಂದ 25 ರಷ್ಟುಕಡಿಮೆ ಆಗಿದಾಗ್ಯು ಇತರೇ ಕಂಪೆನಿಗಳಾದ "ಟಾಟಾ" ಇತ್ಯಾದಿಗಳಲ್ಲಿನ ಸಾಮಾನುಗಳಿಗಿಂತ ಶೇಕಡ 30 ರಿಂದ 40 ರವರೆಗೆ ಹೆಚ್ಚಾಗಲು ಕಾರಣವೇನೆಂಬುದನ್ನು ಆಲೋಚನೆ ಮಾಡಿದ್ದೀರಾ ?

Sri H. C. DASAPPA.—I do not admit that it is as much as 30 or 40 per cent. After reduction we are almost coming to a par ; it may be just a little less, because theirs is a big factory and mechanised and this is comparatively a small one here.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಪೊದಲು ಇದರ ವಹಿವಾಟನ್ನು ಮಲಬಾರಿನವರು ನೋಡಿಕೊಳ್ಳುತ್ತಿದ್ದರು. ಆದರೆ ಇಲ್ಲಿಯವರೇ ಈಗ ಅದನ್ನು ನೋಡಿಕೊಳ್ಳುತ್ತಿರುವುದರಿಂದ ಆ ವಹಿವಾಟನಲ್ಲೇನಾದರೂ ದೋಷವಿದೆಯೇ ಏನು ಎಂಬುದನ್ನು ನೋಡಿದ್ದೀರಾ ?

Sri H. C. DASAPPA.—The defect is mainly this. We have not mechanised the Implements Factory. I have seen big implements factories. Unless you mechanise, you cannot compete in this line. ಹಾಗೆ ಮೆಕನೈಜ್ ಮಾಡದೆ ಮಚ್ಚು, ಕೊಡಲಿಗಳನ್ನು ಕೈಯಿಂದ ತಯಾರುಮಾಡುವುದಕ್ಕೂ ಅದಕ್ಕೂ ಬಹಳ ವ್ಯತ್ಯಾಸವಿದೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಹಿಂದೆ ರೇಟ್ ಕಮ್ಮಿಯಾಗಿದ್ದುದರಿಂದ ಲಾಭವೂ ಸಹ ಕೇವಲ ಕಡಿಮೆ ಪರ್ಸೆಂಟೇಜಿನಲ್ಲೆ, ಬರುತ್ತಿತ್ತು. ಈಗ ಅದನ್ನು ಜಾಸ್ತಿ ಮಾಡಿರುವುದರಿಂದ ಹೀಗೆ ಲುಕ್ಸಾನಾಗುತ್ತಿದೆಯೆಂದ್ದು ಈ ದರಗಳನ್ನು ಕಡಿಮೆಮಾಡಲು ಆಲೋಚನೆ ಮಾಡುವಿರಾ ? ಅಥವಾ ಇದನ್ನು ನರಿತೂಗಿಸಲು ಹೆಚ್ಚಿನ ಬಂಡವಾಳ ಹಾಕಲಾಗುತ್ತದೆಯೇ ?

ಶ್ರೀ ಎಚ್. ಸಿ. ದಾಸಪ್ಪನವರು.—ಅದನ್ನು ಆ ಉದ್ದೇಶಕ್ಕಾಗಿಯೇ ಕಡಿಮೆಮಾಡಲಾಗುವುದಿಲ್ಲ. ಹಾಗೆ ಕಡಿಮೆಮಾಡಿದರೆ ಲುಕ್ಸಾನು ಇನ್ನೂ ಹೆಚ್ಚಾಗುತ್ತದೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಹಾಗಾದರೆ ಈ ಗೃಹಕೈಗಾರಿಕೆಗಳನ್ನು ಮುಂದುವರಿಸಬೇಕೆಂಬ ತತ್ವವೇ ಹೋದ ಹಾಗಾಗುತ್ತದೆಯಲ್ಲವೇ ?

Sri H. C. DASAPPA.—The policy of cottage industries is based on the principle of self-sufficiency. It is a matter of using spare hours in a village and developing rural economy, so that the villages become self-sufficient. To develop them for purposes of competing with mechanised products is not an easy affair.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಈ ಮೆಕಾನೈಜ್ ಮಾಡುವ ಸೂಚನೆ ತಮಗೆ ಯಾವಾಗ ಬಂದಿತು ?

ಶ್ರೀ ಎಚ್. ಸಿ. ದಾಸಪ್ಪನವರು.—ಸುಮಾರು ಎರಡು ವರ್ಷಗಳ ಹಿಂದೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಆ ಸೂಚನೆಯು ಇನ್ನೂ ಮುಂಜೂರಾಗದಿರಲು ಕಾರಣವೇನು ?

ಶ್ರೀ ಎಚ್. ಸಿ. ದಾಸಪ್ಪನವರು.—ಮೂರು ಅಥವಾ ನಾಲ್ಕು ಲಕ್ಷ ಅದಕ್ಕಾಗಿ ಒದಗಿಸಬೇಕಾಗಿದೆ. It may be round about Rs. 5 lakhs. It is just what we are considering.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಈಗ ನಾನು ಹೇಳುತ್ತಿರುವುದು, mainly they are giving attention to manufacture of agricultural implements. ಇಂಥಾದ್ದರಲ್ಲಿ 3-4 ಲಕ್ಷ ಒದಗಿಸುವುದು ಬಹಳ ಸಣ್ಣವಿಷಯ ಅಲ್ಲವೇ ! It is a small amount when compared with the work we have turned out.

Sri H. C. DASAPPA.—What is it that you want ? Question please ?

Sri H. B. GUNDAPPA GOWDA.—I want that the whole thing must be reviewed and sanctioned early.

Sri H. C. DASAPPA.—I shall certainly consider that suggestion.

ಶ್ರೀ ಟಿ. ಸುಬ್ರಹ್ಮಣ್ಯರವರು (ತುಮಕೂರು ಜಿಲ್ಲೆ)—ಈಗ ಈ ಕಂಪೆನಿಯಲ್ಲಿ ತಯಾರಾಗುತ್ತಿರುವ ಮಾಲು ಖರ್ಚಾಗದೆ ಬಹಳವಾಗಿ ನಿಂತುಹೋಗಿದೆಯೇ ?

ಶ್ರೀ ಎಚ್. ಸಿ. ದಾಸಪ್ಪನವರು.—ಹೌದು.

ಶ್ರೀ ಟಿ. ಸುಬ್ರಹ್ಮಣ್ಯರವರು.—ಹಾಗೆ ಎಷ್ಟು ನಿಂತಿದೆ ?

Sri H. C. DASAPPA.—About 3-4 lakhs of rupees. It is now moving out.

ಶ್ರೀ ಟಿ. ಸುಬ್ರಹ್ಮಣ್ಯರವರು.—ಈಗ ಉತ್ಪತ್ತಿಯನ್ನು ಕಡಿಮೆ ಮಾಡಲಾಗಿದೆಯೇ ?

ಶ್ರೀ ಎಚ್. ಸಿ. ದಾಸಪ್ಪನವರು.—ಸ್ವಲ್ಪಮಟ್ಟಿಗೆ ಕಡಿಮೆ ಮಾತರಾಗಿದೆ.

ಶ್ರೀ ಟಿ. ಸುಬ್ರಹ್ಮಣ್ಯರವರು.—ಹಾಗಾದರೆ ನಷ್ಟ ಹೇಗೆ ಭರಿಂತು ?

Sri H. C. DASAPPA.—I have answered it in the very first question you put. Stocks have accumulated, because things have not moved.

Mr. SPEAKER.—Sri A. Hutche Gowda (Not present). Question No. 40 will be treated as an unstarred question.

Grant of Loans to Educated Unemployed.

Q.*—72. **Sri K. R. MADHAVA RAO (Shimoga District—General).—

Will the Government be pleased to state :—

(*a*) the number of applications received for grant of loans from the educated unemployed for starting small scale industries for the years 1947-48, 1948-49 and 1949-50 ;

(*b*) the total amount of loan asked for ;

(*c*) the number of applications sanctioned and the amount involved ?

A.—**Sri H. C. DASAPPA** (Minister for Finance and Industries).—

	Year	*Number of applications received.*
(*a*)	1947-48	423
	1948-49	434
	1949-50	340

(*b*) This information is not readily available.

	Year	*Number of applications.*	*Amount involved.*
			Rs.
(*c*)	1947-48 ...	16 ...	20,050
	1948-49 ...	17 ...	15,250
	1949-50 ...	45 ...	43,650

ಶ್ರೀ ಕೆ. ಆರ್. ಮಾಧವರಾಯರು.—(ಬ) ಪ್ರಶ್ನೆಗೆ, "This information is not readily available" ಎಂದು ಹೇಳಿದ್ದೀರಿ. ಸುಮಾರಾಗಿ ಹೇಳುವುದಕ್ಕಾಗುತ್ತದೆಯೇ ?

ಶ್ರೀ ಎಚ್. ಸಿ. ದಾಸಪ್ಪನವರು.—ಹೇಳುವುದಕ್ಕಾಗಿದ್ದಿದ್ದರೆ ಹೇಳುತ್ತಿದ್ದೆ. ಹೇಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಕೆ. ಆರ್. ಮಾಧವರಾಯರು.—5-6 ಲಕ್ಷ ರೂಪಾಯಿಗಳೆಂದು ಹೇಳಿದರೆ ಒಪ್ಪುತ್ತೀರಾ ?